**ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಕುಲಪತಿಗಳ ಸಭಾಂಗಣದಲ್ಲಿ ದಿನಾಂಕ 2-12-2010 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ದ್ವಿತೀಯ ಸಭೆಯ ನಡುವಳಿಗಳು:**

**ಉಪಸ್ಥಿತರಿದ್ದ ಸದಸ್ಯರು:**

| | | | |
|---|---|---|---|
| 1 | ಡಾ. ಬಿ.ವಿ. ಪಾಟೀಲ | ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2 | ಶ್ರೀ ಸುಂದರ ರಾಜ ಗುಪ್ತಾ | ಪ್ರಧಾನ ಕಾರ್ಯದರ್ಶಿ (ಆರ್ಥಿಕ) ಕರ್ನಾಟಕ ಸರಕಾರ ಇವರ ಪರವಾಗಿ ಉಪಕಾರ್ಯದರ್ಶಿ | ಸದಸ್ಯರು |
| 3 | ಶ್ರೀ ಭೋಜನಗೌಡ | ಪ್ರಗತಿಪರ ರೈತರು, ಹೊಸಪೇಟೆ | ಸದಸ್ಯರು |
| 4 | ಶ್ರೀ ಶಂಕರಗೌಡ ಹರವಿ | ಪ್ರಗತಿಪರ ರೈತರು, ಹರವಿ | ಸದಸ್ಯರು |
| 5 | ಶ್ರೀ ವೆಂಕನಗೌಡ ಮಲ್ಕಾಪುರ | ಪ್ರಗತಿಪರ ರೈತರು, ರಾಯಚೂರು | ಸದಸ್ಯರು |
| 6 | ಶ್ರೀ ಶಿವಪ್ಪ ಬಿ. ಬಲ್ಲಿದವ | ಪ್ರಗತಿಪರ ರೈತರು, ಕೋತಿಗುಡ್ಡ | ಸದಸ್ಯರು |
| 7 | ಶ್ರೀ ಹನುಮೇಶ ನಾಯಕ | ಪ್ರಗತಿಪರ ರೈತರು, ಹುಲಿಹೈದರ್ | ಸದಸ್ಯರು |
| 8 | ಡಾ. ಚಲ್ಲಯ್ಯ | ಪ್ರಖ್ಯಾತ ಶಿಕ್ಷಣ ತಜ್ಞರು, ಬೆಂಗಳೂರು | ಸದಸ್ಯರು |
| 9 | ಶ್ರೀ ಬಸವರಾಜ ಪಾಟೀಲ ಇಟಗಿ | ಕೃಷಿ ಕೈಗಾರಿಕೋದ್ಯಮಿ, ಇಟಗಿ | ಸದಸ್ಯರು |
| 10 | ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ | ಸಮಾಜ ಸೇವಕರು, ಕನ್ನಂಗಿ | ಸದಸ್ಯರು |
| 11 | ಡಾ. ಎಸ್.ಜಿ. ಪಾಟೀಲ | ಡೀನ್ (ಕೃಷಿ) | ಸದಸ್ಯರು |
| 12 | ಡಾ. ಪಿ. ಬಾಲಕೃಷ್ಣನ್ | ಕುಲಸಚಿವರು | ಸದಸ್ಯ-ಕಾರ್ಯದರ್ಶಿ |

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವ್ಯವಸ್ಥಾಪನಾ ಮಂಡಳಿಯ ದ್ವಿತೀಯ ಸಭೆಯನ್ನು ಮಾನ್ಯ ಕುಲಪತಿಗಳು ಹಾಗೂ ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು ಸರ್ವಸದಸ್ಯರನ್ನು ಸ್ವಾಗತಿಸುತ್ತಾ ಪ್ರಾರಂಭಿಸಿದರು. ಅಜೆಂಡಾ ಐಟಂವಾರು ಚರ್ಚಿಸಿ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

**ಕಾರ್ಯಸೂಚಿ ಸಂ: 1 : ದಿನಾಂಕ 13-8-2010 ರಂದು ಜರುಗಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು ಮತ್ತು ಸದರಿ ನಡುವಳಿಗಳ ಪ್ರಕಾರ ಕೈಗೊಂಡ ಕ್ರಮಗಳು.**

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಪ್ರಥಮ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಪ್ರಕಾರ ಕೈಗೊಂಡ ಕ್ರಮಗಳನ್ನು ದೀರ್ಘ ಚರ್ಚೆಯ ನಂತರ ಸ್ಥಿರೀಕರಿಸಲಾಯಿತು ಮತ್ತು ಕೆಲವು ವಿಷಯಗಳ ಕುರಿತು ಸಲಹೆಗಳನ್ನು ಈ ಕೆಳಗಿನಂತೆ ನೀಡಲಾಯಿತು. ಹಿಂದಿನ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದನ್ನು ಸುಲಭವಾಗಿ ತಿಳಿಯುವಂತೆ ನಿರ್ಧಿಷ್ಟವಾದ ತಖ್ತೆಯಲ್ಲಿ ಸ್ಪಷ್ಟವಾಗಿ ಮಂಡಿಸಲು ಉಪ-ಕಾರ್ಯದರ್ಶಿ (ಆರ್ಥಿಕ) ಇವರು ಸಲಹೆ ನೀಡಿದರು.

1. ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆಡಳಿತ ವ್ಯವಸ್ಥೆ ಹಾಗೂ ಶೈಕ್ಷಣಿಕ ಚಟುವಟಿಕೆಗಳು
2. ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಸಂಶೋಧನಾ ನಿರ್ದೇಶನಾಲಯದ ಚಟುವಟಿಕೆಗಳ ಮಾಹಿತಿ
3. ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಬೀಜೋತ್ಪಾದನಾ ಚಟುವಟಿಕೆಗಳ ಮಾಹಿತಿ
4. ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ವಿಸ್ತರಣಾ ನಿರ್ದೇಶನಾಲಯದ ಚಟುವಟಿಕೆಗಳ ಮಾಹಿತಿ
5. ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಕೈಗೊಂಡಿರುವ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಚಟುವಟಿಕೆಗಳ ಮಾಹಿತಿ
6. ಕೃಷಿ ವಿಶ್ವವಿದ್ಯಾಲಯ, ರಾಯಚೂರಿನ ಹಣಕಾಸಿನ ಸ್ಥಿತಿಗತಿ ಬಗ್ಗೆ ಮಾಹಿತಿ

ಮೇಲಿನ ಅಜೆಂಡಾ ಐಟಂಗಳನ್ನು ಸ್ಥಿರೀಕರಿಸಲಾಯಿತು.

7. ಕೃಷಿ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ಕೈಗೊಂಡಿರುವ ಸಿವಿಲ್ ಕಾಮಗಾರಿಗಳ ಮಾಹಿತಿ

ದೀರ್ಘ ಚರ್ಚೆಯ ನಂತರ ಇದನ್ನು ಸ್ಥಿರೀಕರಿಸಿ ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

ಹತ್ತು ಲಕ್ಷ ರೂಪಾಯಿಗಳಿಗೂ ಮೀರಿದ ಸಿವಿಲ್ ಕಾಮಗಾರಿಗಳ ಟೆಂಡರ್‌ಗಳನ್ನು ಸ್ವೀಕೃತಿಯಾದ ನಂತರ, ಎಲ್ಲಾ ನೀತಿ, ನಿಯಮ, ವಿಧಾನಗಳನ್ನು ಪಾಲಿಸಿದ ನಂತರ ಅರ್ಹ ಕಾಂಟ್ರ್ಯಾಕ್ಟ್‌ದಾರರ ತುಲನಾತ್ಮಕ ತಖ್ತೆಯನ್ನು ತಯಾರಿಸಿ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅವಗಾಹನೆಗೆ ತಂದನಂತರ ವರ್ಕ್ ಆರ್ಡರ್ ಕೊಟ್ಟು ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳುವಂತೆ ಮಾನ್ಯ ಸದಸ್ಯರುಗಳು ಸಲಹೆ ನೀಡಿದರು.

8. ಗಂಗಾವತಿ ಮತ್ತು ಗುಲ್ಬರ್ಗಾದಲ್ಲಿರುವ ವಿಸ್ತರಣಾ ಶಿಕ್ಷಣ ಘಟಕಗಳನ್ನು ಕ್ರಮವಾಗಿ ಲಿಂಗಸುಗೂರು ಮತ್ತು ಕೊಪ್ಪಳಕ್ಕೆ ಸ್ಥಳಾಂತರಿಸುವುದು.

ಮೇಲಿನ ಅಜೆಂಡಾ ಐಟಂ ಅನ್ನು ಸ್ಥಿರೀಕರಿಸಿ ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

9. ಗುತ್ತಿಗೆ ಆದಾರದ ಮೇಲೆ ತೊಡಗಿಸಿಕೊಂಡಿರುವ ಶಿಕ್ಷಕರ (ಸಹಾಯಕ ಪ್ರಾಧ್ಯಾಪಕರ ಪದವೃಂದ) ಮಾಸಿಕ ಗೌರವಧನವನ್ನು ಹೆಚ್ಚಿಸುವ ಕುರಿತು.

ಮೇಲಿನ ಅಜೆಂಡಾ ಐಟಂ ಅನ್ನು ಸ್ಥಿರೀಕರಿಸಿ ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

10. ಸಲಹೆಗಾರರಿಗೆ ಗೌರವಧನ ಹೆಚ್ಚಿಸುವ ಕುರಿತು

ಈ ಮೊದಲೇ ತೀರ್ಮಾನಿಸಿದಂತೆ, ಸಲಹೆಗಾರರ ಸೇವೆಯನ್ನು 31ನೇ ಡಿಸೆಂಬರ್, 2010 ರಂದು ಕೊನೆಗೊಳಿಲಾಗುವುದು. ಮಾನ್ಯ ಕುಲಪತಿಗಳವರ ವಿನಂತಿ ಮೇರೆಗೆ ಆಡಳಿತ ಸಲಹೆಗಾರರ ಸೇವೆಯನ್ನು ಮಾರ್ಚ್–2011 ವರೆಗೆ ಮುಂದುವರೆಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಒಪ್ಪಿಗೆ ಸೂಚಿಸಿತು.

11. ವಿಶೇಷ ಘಟಕ ಯೋಜನೆ ಅಡಿಯಲ್ಲಿ ಹಸುಗಳನ್ನು ಖರೀದಿಸಲು ಹಣಕಾಸು ಒಪ್ಪಿಗೆ ಕುರಿತು
12. ಗಿರಿಜನ ಉಪ ಯೋಜನೆ ಅಡಿಯಲ್ಲಿ ಹಸುಗಳನ್ನು ಖರೀದಿಸಲು ಹಣಕಾಸು ಒಪ್ಪಿಗೆ ಕುರಿತು

ಮೇಲಿನ ಅಜೆಂಡಾ ಐಟಂ ಅನ್ನು ಸ್ಥಿರೀಕರಿಸಿ ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು. ಮೇಲೆ ತಿಳಿಸಿದ ಯೋಜನೆಗಳಡಿಯಲ್ಲಿ ಆಕಳುಗಳನ್ನು ವಿತರಿಸುವ ಸಲುವಾಗಿ ಪ್ರದೇಶ ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳನ್ನು ಯೋಜನೆಯ ನಿಯಮಾವಳಿಗಳನುಸಾರ ಮತ್ತು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳನ್ನು ಸಮಾಲೋಚಿಸಿ ಆಯ್ಕೆ ಮಾಡಲು ಸಲಹೆ ನೀಡಲಾಯಿತು. ಸಂಶೋಧನಾ ನಿರ್ದೇಶಕರು, ಕೃವಿವಿ ರಾಯಚೂರು ಇವರು ಸದರಿ ಯೋಜನೆಗಳ ವಿವಿಧ ಗ್ರಾಮಗಳ ಫಲಾನುಭವಿಗಳ ಯಾದಿ, ಹಸುಗಳ ಖರೀದಿಯ ವೆಚ್ಚ, ಹಸುಗಳ ವಿತರಣೆಯ ಸಂಪೂರ್ಣ ವಿವರಗಳನ್ನು ಇಡಲು ತಿಳಿಸಲಾಯಿತು.

13. ಅಧಿಕಾರ ನಿಯೋಜನೆಯಿಂದ ಸಿಬ್ಬಂದಿಯವರಿಗೆ (ಶಿಕ್ಷಕರು/ಶಿಕ್ಷಕೇತರರು) ವೈದ್ಯಕೀಯ ವೆಚ್ಚ ಹಿಂತಿರುಗಿ ಕೊಡುವುದಕ್ಕೆ ಮಂಜೂರಾತಿ ಹಾಗೂ ಇದಕ್ಕಾಗಿ ಆಸ್ಪತ್ರೆಗಳ ಮಾನ್ಯತೆ ಕುರಿತು.

ಮೇಲಿನ ಅಜೆಂಡಾ ಐಟಂ ಅನ್ನು ಸ್ಥಿರೀಕರಿಸಿ ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

14. ಯು.ಜಿ.ಸಿ. ವೇತನ ಪಡೆಯುತ್ತಿರುವ ಶಿಕ್ಷಕರಿಗೆ ಪ್ರಭಾರ ಭತ್ಯ ಮಂಜೂರು ಮಾಡುವ ಕುರಿತು.

ಮೇಲಿನ ಅಜೆಂಡಾ ಐಟಂ ಅನ್ನು ಸ್ಥಿರೀಕರಿಸಿ ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

15. ಶ್ರೀ ಎ.ಎಸ್. ಪಾಟೀಲ್, ಪ್ರಭಾರ ಹಣಕಾಸು ನಿಯಂತ್ರಣಾಧಿಕಾರಿಗಳವರಿಗೆ ವಿಶೇಷ ಭತ್ಯ / ಪ್ರೋತ್ಸಾಹ ಭತ್ಯ ಮಂಜೂರು ಕುರಿತು

ಮೇಲಿನ ಅಜೆಂಡಾ ಐಟಂ ಅನ್ನು ಸ್ಥಿರೀಕರಿಸಿ ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

16. ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸೇವಾ ಸಿಬ್ಬಂದಿಯವರ ಸ್ಕೋರ್ ಕಾರ್ಡ

ಮೇಲಿನ ಅಜೆಂಡಾ ಐಟಂ ಅನ್ನು ಸ್ಥಿರೀಕರಿಸಿ ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

17. ಹತ್ತು ಲಕ್ಷ ರೂಪಾಯಿಗಳಿಗೂ ಮೀರಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು

ದೀರ್ಘ ಚರ್ಚೆಯ ನಂತರ ಮೇಲಿನ ಅಜೆಂಡಾ ಐಟಂ ಅನ್ನು ಸ್ಥಿರೀಕರಿಸಿ ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

ಕುಲಪತಿಗಳವರ ನಿವಾಸ (ಕ್ವಾರ್ಟರ್ಸ್) ದಲ್ಲಿ ಕನಿಷ್ಟ ಮೂರು ಬೆಡ್–ರೂಮ್‌ಗಳು ಇರುವ ಹಾಗೆ ಸೂಕ್ತ ಮಾರ್ಪಾಡು ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು.

18 ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರವರಿಗೆ ಪ್ರವಾಸ ಭತ್ಯ, ತುಟ್ಟಿ ಭತ್ಯ ಮತ್ತು ಆಸೀನ ಭತ್ಯ ಕೊಡುವ ಬಗ್ಗೆ

ಮೇಲಿನ ಅಜೆಂಡಾ ಐಟಂ ಅನ್ನು ಸ್ಥಿರೀಕರಿಸಿ ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

19 ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಶಾಸನ, ನಿಯಮ ಹಾಗೂ ವಿನಿಯಮಗಳನ್ನು ರಚನೆ ಮಾಡುವವರೆಗೆ ಕೃ.ವಿ.ವಿ. ಧಾರವಾಡದ ಶಾಸನ, ನಿಯಮ ಹಾಗೂ ವಿನಿಯಮಗಳನ್ನು ಅಂಗೀಕರಿಸುವುದು ಮತ್ತು ಪಾಲಿಸುವುದು

ಮೇಲಿನ ಅಜೆಂಡಾ ಐಟಂ ಅನ್ನು ಸ್ಥಿರೀಕರಿಸಿ ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

20 ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳ ಚರ್ಚೆ:

ಮೇಲಿನ ಅಜೆಂಡಾ ಐಟಂ ಅನ್ನು ಸ್ಥಿರೀಕರಿಸಿ ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

**ಕಾರ್ಯಸೂಚಿ ಸಂ: 2: ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪ್ರಥಮ ಘಟಿಕೋತ್ಸವಕ್ಕೆ ಅತಿಥಿಗಳನ್ನು ನಿಗದಿಪಡಿಸುವ ಕುರಿತು.**

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಪ್ರಥಮ ಘಟಿಕೋತ್ಸವವನ್ನು ಏರ್ಪಾಡು ಮಾಡಲು ಮತ್ತು ಘಟಿಕೋತ್ಸವಕ್ಕೆ ಈ ಕೆಳಗಿನಂತೆ ಅನುಕ್ರಮವಾಗಿ ಪ್ರಸ್ತಾಪಿಸಿದವರಲ್ಲಿ ಒಬ್ಬರನ್ನು ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸಲು ವ್ಯವಸ್ಥಾಪನಾ ಮಂಡಳಿಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

1. ಡಾ. ಎಸ್. ಅಯ್ಯಪ್ಪನ್, ಡೈರೆಕ್ಟರ್ ಜನರಲ್, ಭಾರತೀಯ ಕೃಷಿ ಅನುಸಂಧಾನ ಪರಿಷತ್ತು (ಐ.ಸಿ.ಎ.ಆರ್), ನವದೆಹಲಿ
2. ಡಾ. ವಿಲಿಯಂ ಡಾರ್, ಡೈರೆಕ್ಟರ್ ಜನರಲ್, ಅಂತರ ರಾಷ್ಟ್ರೀಯ ಅರೆ–ಉಷ್ಣವಲಯದ ಬೆಳೆಗಳ ಸಂಶೋಧನಾ ಸಂಸ್ಥೆ (ಇಕ್ರಿಸ್ಯಾಟ್), ಹೈದ್ರಾಬಾದ್
3. ಪದ್ಮಶ್ರೀ ಡಾ: ಎಂ. ಮಹಾದೇವಪ್ಪ, ವಿಶ್ರಾಂತ ಕುಲಪತಿಗಳು, ಕೃವಿವಿ ಧಾರವಾಡ

**ಕಾರ್ಯಸೂಚಿ ಸಂ: 3: ಕರ್ನಾಟಕ ರಾಜ್ಯದ ಹೋರಗಡೆಯಿರುವ ಸಂಸ್ಥೆಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು ಭೇಟಿ ನೀಡುವ ಕುರಿತು.**

ರೈತರ ಹಿತದೃಷ್ಟಿಯಿಂದ ಮತ್ತು ಯುಕ್ತವಾದ ಹೊಸ ತಂತ್ರಜ್ಞಾನಗಳನ್ನು ಈ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಳ್ಳುವ ಸಲುವಾಗಿ ಕರ್ನಾಟಕ ರಾಜ್ಯದ ಹೋರಗಡೆಯಿರುವ ಸಂಸ್ಥೆಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳು ಭೇಟಿ ನೀಡುವ ವ್ಯವಸ್ಥೆ ಮಾಡಲು ವ್ಯವಸ್ಥಾಪನಾ ಮಂಡಳಿಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ಕಾರ್ಯಸೂಚಿ ಸಂ: 4: ಅರೆಕಾಲಿಕ ಆಧಾರದ ಮೇಲೆ ತೊಡಗಿಸಿಕೊಂಡಿರುವ ಶಿಕ್ಷಕರ (ಸಹಾಯಕ ಪ್ರಾಧ್ಯಾಪಕರ ಪದವೃಂದ) ಮಾಸಿಕ ಗೌರವಧನವನ್ನು ಹೆಚ್ಚಿಸುವ ಕುರಿತು.**

ಈಗ ನೀಡುತ್ತಿರುವ ಗೌರವಧನವು ಬಹಳ ಕಡಿಮೆಯಿದ್ದು, ಬೋಧಕರು ಸಿಗುತ್ತಿಲ್ಲವಾದ್ದರಿಂದ ಅರೆಕಾಲಿಕ ಆಧಾರದ ಮೇಲೆ ಮತ್ತು ಕ್ರೆಡಿಟ್–ಅವರ್ ಆಧಾರದ ಮೇಲೆ ತೊಡಗಿಸಿಕೊಂಡಿರುವ ಶಿಕ್ಷಕರ (ಸಹಾಯಕ ಪ್ರಾಧ್ಯಾಪಕರ ಪದವೃಂದ) ಮಾಸಿಕ ಗೌರವಧನವನ್ನು ಪ್ರಸ್ತಾಪಿಸಿದಂತೆ ಹೆಚ್ಚಿಸಲು ವ್ಯವಸ್ಥಾಪನಾ ಮಂಡಳಿಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

**ಕಾರ್ಯಸೂಚಿ ಸಂ: 5: ಅಂತರರಾಷ್ಟ್ರೀಯ ತರಬೇತಿಗಳಲ್ಲಿ ಭಾಗವಹಿಸಲು / ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಲು ಶಿಕ್ಷಕರು / ವಿಜ್ಞಾನಿಗಳಿಗೆ ವಿದೇಶಗಳಿಗೆ ಪ್ರತಿನಿಯೋಜನೆ ಮಾಡುವ ಕುರಿತು.**

ಶಿಕ್ಷಕರು / ವಿಜ್ಞಾನಿಗಳಿಗೆ ಕೃವಿವಿ ಅನುದಾನದೊಂದಿಗೆ / ಕೃವಿವಿಯ ಆರ್ಥಿಕ ಹೊರೆ ಇಲ್ಲದಂತೆ ಅಂತರರಾಷ್ಟ್ರೀಯ ತರಬೇತಿಯಲ್ಲಿ ಭಾಗವಹಿಸಲು / ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಲು ವಿದೇಶಗಳಿಗೆ ಪ್ರತಿನಿಯೋಜನೆ ಮಾಡಿದ ವಿಷಯಗಳನ್ನು ಪ್ರಸ್ತಾಪಿಸಿದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಒಪ್ಪಿಗೆ ಸೂಚಿಸಿದ್ದು ಈ ಕುರಿತು ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

**ಕಾರ್ಯಸೂಚಿ ಸಂ: 6: ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಭೂಮಿಯನ್ನು ಕೊಡಲು ವಿವಿಧ ಸಂಘ–ಸಂಸ್ಥೆಗಳವರು ಕೋರಿರುವ ಕುರಿತು.**

ಕೃಷಿ ವಿಶ್ವವಿದ್ಯಾಲಯ ರಾಯಚೂರು ಇದೀಗ ಅಸ್ತಿತ್ವದಲ್ಲಿ ಬಂದಿದ್ದು, ಶೈಕ್ಷಣಿಕ, ಸಂಶೋಧನಾತ್ಮಕ ಮತ್ತು ವಿಸ್ತರಣೆಯ ಬಹಳಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕಾಗಿದೆ ಮತ್ತು ಇದಕ್ಕಾಗಿ ಹೆಚ್ಚಿನ ಭೂಮಿಯ ಅವಶ್ಯಕತೆಯಿರುತ್ತದೆ. ಅಲ್ಲದೆ ವಿಶ್ವವಿದ್ಯಾಲಯವು ತನ್ನದೇ ಆದ ಆಡಳಿತ ಭವನವನ್ನು ಕಟ್ಟುವುದು ಅವಶ್ಯವಿರುತ್ತದೆ. ಕೃಷಿ ವಿವಿಯ ತನ್ನದೇ ಆದ ಅವಶ್ಯಕತೆಗಳಿರುವುದರಿಂದ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಭೂಮಿಯನ್ನು ಕೊಡಲು ಕೋರಿಕೊಂಡಿರುವ ಸಂಘ–ಸಂಸ್ಥೆಗಳವರಿಗೆ ಮತ್ತು ಇನ್ನೂ ಮುಂದಿನ ದಿನಗಳಲ್ಲಿ ಕೋರಿಕೊಳ್ಳುವವರಿಗೆ ಭೂಮಿಯನ್ನು ಕೊಡಲು ಆಗುವುದಿಲ್ಲವೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಆದರೂ ಸಹ ಅತೀ ಅವಶ್ಯಕ ಸೇವೆಯಾದ ಬ್ಯಾಂಕ್ (ಎಸ್.ಬಿ.ಐ.) ಗೆ ಮಾತ್ರ ಅವರ ಯೋಜನೆ ಮತ್ತು ಅವಶ್ಯಕತೆಗೆ ಅನುಗುಣವಾಗಿರುವ ಕಟ್ಟಡವನ್ನು ಕಟ್ಟಿಸಿ ಒಡಂಬಡಿಕೆ (ಎಂ.ಒ.ಯು.) ಮಾಡಿಕೊಂಡು ಬಾಡಿಗೆ ಕರಾರಿನ ಮೇರೆಗೆ ಕೊಡಲು ತೀರ್ಮಾನಿಸಲಾಯಿತು. ಫಾರಂ / ವಿಶ್ವವಿದ್ಯಾಲಯದ ಹಿಂಭಾಗದಲ್ಲಿರುವ ಭೂಮಿಯು ಕಡಿಮೆ ಬೆಲೆಯುಳ್ಳದ್ದಾಗಿರುವುದರಿಂದ ಕೃಷಿ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಅದನ್ನು ಖರೀದಿಸಲು / ಸ್ವಾಧೀನಪಡಿಸಿಕೊಳ್ಳಲು ಮಾನ್ಯ ಸದಸ್ಯರಾದ ಶ್ರೀ ಶಂಕರಗೌಡ ಹರವಿಯವರು ಸಲಹೆ ನೀಡಿದರು. ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಯನ್ನು ವಿಸ್ತರಿಸುವ ಸಲುವಾಗಿ ವಿಶ್ವವಿದ್ಯಾಲಯಕ್ಕೆ ಹತ್ತಿಕೊಂಡಿರುವ ಮತ್ತು ಖಾಲಿಯಿರುವ ಕೆ.ಎ.ಐ.ಸಿ. ಕಟ್ಟಡವನ್ನು ಖರೀದಿಸಲು ಅಥವ ಗೇಣಿ ಕರಾರಿನ ಮೇರೆಗೆ ಪಡೆಯಲು ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಪಾಟೀಲ್ ಇಟಗಿಯವರು ಸಲಹೆ ನೀಡಿದರು.

**ಕಾರ್ಯಸೂಚಿ ಸಂ: 7: ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸ್ನಾತಕೋತ್ತರ ಶೈಕ್ಷಣಿಕ ಮಾಹಿತಿ ನಿಯಮಾವಳಿಗಳನ್ನು ರಚಿಸುವುದು, ಪದವಿಯ ಪಠ್ಯಕ್ರಮಗಳ ಶಿರೋನಾಮ, ಕ್ರೆಡಿಟ್ ಅವರ್ಸನಲ್ಲಿ ಬದಲಾವಣೆ, ಪಠ್ಯಕ್ರಮ ಮತ್ತು ವ್ಯಾಸಂಗ ಕ್ರಮಗಳನ್ನು ಪರಿಷ್ಕರಣೆ ಮಾಡುವುದು.**

ಶೈಕ್ಷಣಿಕ ಪರಿಷತ್ತು ಶಿಫಾರಸ್ಸು ಮಾಡಿದ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಸ್ನಾತಕೋತ್ತರ ಶೈಕ್ಷಣಿಕ ಮಾಹಿತಿ ನಿಯಮಾವಳಿಗಳನ್ನು ರಚಿಸುವುದು, ಪದವಿಯ ಪಠ್ಯಕ್ರಮಗಳ ಶಿರೋನಾಮ, ಕ್ರೆಡಿಟ್ ಅವರ್ಸನಲ್ಲಿ ಬದಲಾವಣೆ, ಪಠ್ಯಕ್ರಮ ಮತ್ತು ವ್ಯಾಸಂಗ ಕ್ರಮಗಳನ್ನು ಪರಿಷ್ಕರಣೆಯನ್ನು ಶೈಕ್ಷಣಿಕ ವರ್ಷ 2010-11 ನೇ ಸಾಲಿನಿಂದ ಜಾರಿಗೆ ತರಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಒಪ್ಪಿಗೆ ಸೂಚಿಸಿದ್ದು ಈ ಕುರಿತು ಕೈಗೊಂಡ ಕ್ರಮಕ್ಕೆ ಅನುಸಮರ್ಥನೆ ನೀಡಲಾಯಿತು.

**ಕಾರ್ಯಸೂಚಿ ಸಂ: 8: ಶ್ರೀ. ಚನ್ನಯ್ಯ ನಂಜಯ್ಯನಮಠ ಇವರ ಸೇವೆಯನ್ನು ಗ್ರೂಪ್ 'ಡಿ' ಹುದ್ದೆಯಿಂದ ಗ್ರೂಪ್ 'ಸಿ' ಹುದ್ದೆಗೆ ವಿಲೀನಗೊಳಿಸುವ ಕುರಿತು.**

ಸವಿಸ್ತಾರವಾದ ಚರ್ಚೆಯ ನಂತರ ಶ್ರೀ. ಚನ್ನಯ್ಯ ನಂಜಯ್ಯನಮಠ ಇವರ ಸೇವೆಯನ್ನು ವಿಶ್ವವಿದ್ಯಾಲಯದ ಗ್ರೂಪ್ 'ಡಿ' ಹುದ್ದೆಯಿಂದ ಗ್ರೂಪ್ 'ಸಿ' ಹುದ್ದೆಗೆ ಭವಿಷ್ಯವರ್ತಿಯಾಗಿ ವಿಲೀನಗೊಳಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಒಪ್ಪಿಗೆ ಸೂಚಿಸಿತು.

**ಕಾರ್ಯಸೂಚಿ ಸಂ: 9: ಕೃಷಿ ಆಧಾರಿತ ಉದ್ಯಮಕ್ಕೆ ಸಂಬಂಧಿಸಿದ ಡಿಪ್ಲೋಮ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಪ್ರಾರಂಭಿಸುವ ಕುರಿತು.**

ದೀರ್ಘ ಚರ್ಚೆಯ ನಂತರ ಕೃಷಿ ಆಧಾರಿತ ಉದ್ಯಮಕ್ಕೆ ಸಂಬಂಧಿಸಿದ ಡಿಪ್ಲೋಮ ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಪ್ರಾರಂಭಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಒಪ್ಪಿಗೆ ಸೂಚಿಸಿತು. ಮಾನ್ಯ ಸದಸ್ಯರಾದ ಶ್ರೀಮತಿ ಹೆಚ್.ಸಿ. ಆಶಾ ಶೇಷಾದ್ರಿ ಅವರು "ಪುಷ್ಪ-ಅಲಂಕಾರ (ಫ್ಲವರ್ ಡೆಕೊರೇಶನ್)" ಕೋರ್ಸ್ ಅನ್ನು ಪ್ರಾರಂಭಿಸಲು ಸಲಹೆ ನೀಡಿದಾಗ, ಸದ್ಯ ತೋಟಗಾರಿಕಾ ವಿಭಾಗದಲ್ಲಿ ತರಬೇತಿ ಹೊಂದಿದ ಸಿಬ್ಬಂದಿವರ ಕೊರತೆ ಇರುವುದರಿಂದ, ಮುಂದಿನ ದಿನಗಳಲ್ಲಿ ಪ್ರಾರಂಭಿಸಲು ಕ್ರಮಕೈಗೊಳ್ಳಲಾಗುವುದೆಂದು ಮಾನ್ಯ ಕುಲಪತಿಗಳು ತಿಳಿಸಿದರು.

**ಕಾರ್ಯಸೂಚಿ ಸಂ: 10: ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಹಣಕಾಸು ಸಮಿತಿಯು ಒಪ್ಪಿಗೆ ನೀಡಿದ ವಿವಿಧ ಐಟಂಗಳಿಗೆ ಹಣಕಾಸಿನ ಅನುಮೋದನೆ ಕುರಿತು**

ದೀರ್ಘ ಚರ್ಚೆಯ ನಂತರ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಹಣಕಾಸು ಸಮಿತಿಯು ಒಪ್ಪಿಗೆ ನೀಡಿದ ವಿವಿಧ ಪ್ರಸ್ತಾವನೆಗಳಿಗೆ ಹಣಕಾಸಿನ ಅನುಮೋದನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಒಪ್ಪಿಗೆ ಸೂಚಿಸಿತು. ಸದ್ಯ ಹೊಸ ವಾಹನಗಳನ್ನು ಖರೀದಿಸುವ ಬದಲಾಗಿ ಹೊರಗಡೆಯಿಂದ / ಬಾಡಿಗೆ ವಾಹನಗಳನ್ನು ಪಡೆಯಲು ಸಲಹೆ ನೀಡಿದರು. ಯೋಜನೇತರ ಅಡಿಯಲ್ಲಿ ಬರುವ ಅಧಿಕಾರಿಗಳ, ಶಿಕ್ಷಕರ ಮತ್ತು ಇತರೇ ಸಿಬ್ಬಂದಿಯವರ ಖರ್ಚಿನ ವಿವರಗಳನ್ನು ಪ್ರತ್ಯೇಕವಾಗಿ ಮತ್ತು ಸ್ಪಷ್ಟವಾಗಿ ನೀಡಲು ಮಾನ್ಯ ಸದಸ್ಯರುಗಳು ಸಲಹೆ ನೀಡಿದರು. ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಪಾಟೀಲ ಇಟಗಿಯವರು ಯೋಜನೇತರ ಅಡಿಯಲ್ಲಿ ಪೂರ್ಣ ಪ್ರಮಾಣದ ಅನುದಾನ ಕೊಡುತ್ತಿಲ್ಲ, ಆದ್ದರಿಂದ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಇದರಡಿಯಲ್ಲಿ ಹೆಚ್ಚಿನ ಧನಸಹಾಯವನ್ನು ಪಡೆಯಲು ಪ್ರಯತ್ನಿಸಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

**ಹೆಚ್ಚುವರಿ ಕಾರ್ಯಸೂಚಿ ಸಂ: 1: ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆಡಳಿತ ಭವನದ ಕಲ್ಪನಾತ್ಮಕ ರಚನಾಕ್ರಮ.**

ಮೆ: ವೈಷ್ಣವಿ ಕನ್ಸಲ್ಟಂಟ್ಸ್, ಹುಬ್ಬಳ್ಳಿ ಇವರು ಉದ್ದೇಶಿತ ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆಡಳಿತ ಭವನದ ಕಲ್ಪನಾತ್ಮಕ ರಚನಾಕ್ರಮ ಮತ್ತು ಅದಕ್ಕೆ ಸಂಬಂಧಿಸಿದ ವಿವರಗಳನ್ನು ಪ್ರಸ್ತಾಪಿಸಿದರು. ದೀರ್ಘ ಚರ್ಚೆಯ ನಂತರ ಪ್ರಸ್ತಾವನೆಯ

ಅನುಮೋದನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಒಪ್ಪಿಗೆ ನೀಡಿ ಸದರಿ ಯೋಜನೆಯ ವಿವರಗಳು, ನಕಾಶೆಗಳು, ಕಟ್ಟಡಗಳ ಚಿತ್ರಗಳ ವಿವರಗಳನ್ನು ಒದಗಿಸಲು ತಿಳಿಸಲಾಯಿತು. ಮಾನ್ಯ ಸದಸ್ಯರಾದ ಡಾ. ಚಲ್ಲಯ್ಯ ಅವರು ಭೀಮರಾಯನಗುಡಿಯಲ್ಲಿ "ಒಂದು ಸ್ಟೂಡೆಂಟ್ಸ್ ಕನ್ವೆನ್‌ಶನ್/ ಒಂದು ಸ್ಪೋರ್ಟ್ಸ್ ಸೆಂಟರ್" ಸ್ಥಾಪಿಸಲು ಸಲಹೆ ನೀಡಿದರು.

**ಹೆಚ್ಚುವರಿ ಕಾರ್ಯಸೂಚಿ ಸಂ: 2: ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕೇತರ ಸಿಬ್ಬಂದಿಯವರ ನಿವೃತ್ತಿ ವಯಸ್ಸನ್ನು 60 ವರ್ಷದಿಂದ 62 ವರ್ಷಕ್ಕೆ ಹೆಚ್ಚಿಸುವ.**

ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಶಿಕ್ಷಕೇತರ ನೌಕರರ ಸಂಘದ ಮನವಿಯನ್ನು ದೀರ್ಘವಾಗಿ ಚರ್ಚಿಸಿದ ನಂತರ ಶಿಕ್ಷಕೇತರ ಸಿಬ್ಬಂದಿಯವರ ನಿವೃತ್ತಿ ವಯಸ್ಸನ್ನು 60 ವರ್ಷದಿಂದ 62 ವರ್ಷಕ್ಕೆ ಹೆಚ್ಚಿಸುವ ಪ್ರಸ್ತಾವನೆಯನ್ನು ಪರಿಗಣಿಸಲು ಸರಕಾರಕ್ಕೆ ಕಳುಹಿಸುವಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಒಪ್ಪಿಗೆ ನೀಡಿ ಶಿಫಾರಸ್ಸು ಮಾಡಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:**

1) ಮಾನ್ಯ ಸದಸ್ಯರಾದ ಶ್ರೀ ಶಂಕರಗೌಡ ಹರವಿ ಅವರು ಹೊಸ ಕೃಷಿ ರಾಸಾಯನಿಕಗಳ ಅಭಿವೃದ್ಧಿಗಾಗಿ ಸಂಶೋಧನೆಗಳನ್ನು ಕೈಗೊಳ್ಳಲು ಸಲಹೆ ನೀಡಿದಾಗ, ಪ್ರಸ್ತುತ ರಾಸಾಯನಿಕಗಳ ಪರೀಕ್ಷೆ ಮಾತ್ರ ಮಾಡಲಾಗುತ್ತಿದೆಯೆಂದು ಅಧ್ಯಕ್ಷರು ತಿಳಿಸಿದರು. ಅಲ್ಲದೆ ಮಾನ್ಯ ಸದಸ್ಯರುಗಳ ಈ ವಿಚಾರವನ್ನು ಭಾರತ ಸರಕಾರಕ್ಕೆ ಪತ್ರದ ಮುಖಾಂತರ ತಿಳಿಸುತ್ತಾ ಹೊಸ ಕೃಷಿ ರಾಸಾಯನಿಕಗಳ ಅಭಿವೃದ್ಧಿಗಾಗಿ ರಾಷ್ಟ್ರ ಮಟ್ಟದಲ್ಲಿ ಧನಸಹಾಯವನ್ನು ಒದಗಿಸುವಂತೆ ಕೋರಲು ಸಲಹೆ ನೀಡಿದರು.

2) ಮಾನ್ಯ ಸದಸ್ಯರುಗಳು ವಿವಿಧ ಉಪಸಮಿತಿಗಳನ್ನು ರಚಿಸಲು ಅಭಿಪ್ರಾಯ ವ್ಯಕ್ತಪಡಿಸಿದರು. ಇದಕ್ಕೆ ಅಧ್ಯಕ್ಷರು ಮತ್ತು ಉಪಕಾರ್ಯದರ್ಶಿ (ಆರ್ಥಿಕ) ಇವರುಗಳು ಕೃಷಿ ವಿಜ್ಞಾನ ವಿಶ್ವವಿದ್ಯಾಲಯಗಳ ಅಧಿನಿಯಮ 2009 ರ ಪ್ರಕಾರ ಕೇವಲ ಹಣಕಾಸು ಉಪ-ಸಮಿತಿ ರಚಿಸಲಾಗಿದ್ದು, ಇತರೇ ಉಪಸಮಿತಿಗಳನ್ನು ರಚಿಸಲು ಕೃವಿವಿಯ ಪರಿನಿಯಮದಲ್ಲಿ ಅವಕಾಶಗಳನ್ನು ಕಲ್ಪಿಸಿಕೊಳ್ಳಬೇಕಾಗಿರುತ್ತದೆ, ಇದಕ್ಕಾಗಿ ಧಾರವಾಡದಲ್ಲಿ ಏರ್ಪಡಿಸಿದ ರಾಜ್ಯದ ಎಲ್ಲಾ ಕೃವಿವಿಗಳ ಹಾಗೂ ತೋಟಗಾರಿಕಾ ವಿಶ್ವವಿದ್ಯಾಲಯದ ಜಂಟಿ ಸಭೆಯಲ್ಲಿ ಇದನ್ನು ಚರ್ಚಿಸಿ ಆದಷ್ಟು ಬೇಗ ಪೂರ್ಣಗೊಳಿಸಲಾಗುವುದೆಂದು ತಿಳಿಸಿದರು.

3) ಮಾನ್ಯ ಸದಸ್ಯರುಗಳು ವಿಶ್ವವಿದ್ಯಾಲಯದ ಯಾವುದೇ ಸಂಶೋಧನಾ ಕೇಂದ್ರಕ್ಕಾಗಲೀ ಅಥವ ಇತರೆ ಸಂಸ್ಥೆಗಳಿಗಾಗಲೀ ಭೇಟಿ ನೀಡಿ ಮಾಹಿತಿಯನ್ನು ಕೇಳಿದಾಗ ಅವರುಗಳಿಗೆ ಮಾಹಿತಿಯನ್ನು ಒದಗಿಸಲು ತಿಳಿಸುವಂತೆ ಕುಲಸಚಿವರು ಸುತ್ತೋಲೆಯನ್ನು ಹೊರಡಿಸಲು ಸದಸ್ಯರುಗಳು ಸಲಹೆ ನೀಡಿದರು. ಕನಿಷ್ಟ ಇಬ್ಬರು ಅಥವ ಮೂವರು ಮಾನ್ಯ ಸದಸ್ಯರುಗಳು ಒಬ್ಬ ಶಿಕ್ಷಕ / ವಿಜ್ಞಾನಿಯನ್ನು ಕರೆದುಕೊಂಡು ಮಾಹಿತಿ ನೀಡಿ ಅಥವ ಮಾಹಿತಿ ನೀಡದೆಯೇ ಭೇಟಿ ನೀಡುವರು.

4) ವ್ಯವಸ್ಥಾಪನಾ ಮಂಡಳಿಯ ಮುಂದಿನ ಸಭೆಯನ್ನು ತಾತ್ಕಾಲಿಕವಾಗಿ ಜನವರಿ-2011 ಕೊನೇಯ ವಾರದಲ್ಲಿ ಕರೆಯಲು ನಿರ್ಧರಿಸಲಾಯಿತು.

ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿಯವರ ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

(ಪಿ. ಬಾಲಕೃಷ್ಣನ್)
ಕುಲಸಚಿವರು ಹಾಗೂ ಸದಸ್ಯ-ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

ಆದರಪೂರ್ವಕ ಪ್ರತಿಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯ ಎಲ್ಲಾ ಸದಸ್ಯರುಗಳು,
ಕೃವಿವಿ ರಾಯಚೂರು ಇವರುಗಳಿಗೆ.